**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**
**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸ್ಪೆಷಲ್ ಕೇಸ ನಂಃ 11/2016
ಪಿಡಬ್ಲು : 8 ಸಿಡಬ್ಲು : 9

| | |
|---|---|
| ಸಾಕ್ಷಿಯ ಹೆಸರು | : ಡಾ. ಶ್ರೀಶೈಲ ಹುಕ್ಕೇರಿ |
| ತಂದೆಯ ಹೆಸರು | : ಶ್ರೀ.ಬಸಪ್ಪ ಹುಕ್ಕೇರಿ |
| ವಯಸ್ಸು | : 54 ವರ್ಷ |
| ಉದ್ಯೋಗ | : ವೈಧ್ಯಾಧಿಕಾರಿಗಳು, ಪ್ರಾಥಮಿಕ ಆರೋಗ್ಯ ಕೇಂದ್ರ, ಕೊಣ್ಣೂರ, ತಾಃ ಮುದ್ದೇಬಿಹಾಳ, ಜಿಃ ಬಿಜಾಪುರ |
| ವಾಸ್ತವ್ಯ | : ಕೊಣ್ಣೂರ, ತಾಃ ಮುದ್ದೇಬಿಹಾಳ, ಜಿಃ ಬಿಜಾಪುರ |
| ದಿನಾಂಕ | : 09-06-2026 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು. |

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ನಾನು 2013 ರಿಂದ 2016 ರ ವರೆಗೆ ನಾನು ಬೆಳಗಾವಿ ಜಿಲ್ಲೆ, ರಾಯಬಾಗ ತಾಲೂಕು, ಕುಡಚಿ ಗ್ರಾಮದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ವೈಧ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

2. ದಿನಾಂಕ 02-10-2015 ರಂದು ರಾತ್ರಿ 10.20 ಗಂಟೆಗೆ ನಾನು ಆಸ್ಪತ್ರೆಯಲ್ಲಿ ಕರ್ತವ್ಯದಲ್ಲಿ ಇದ್ದಾಗ ಮೊರಬ ಗ್ರಾಮದ 28 ವರ್ಷ ವಯಸ್ಸಿನ ಪ್ರಭಾಕರ ಪ್ರಕಾಶ ಅಸೊದೆ ಎನ್ನುವವರು ಆಸ್ಪತ್ರೆಗೆ ಚಿಕಿತ್ಸೆಗಾಗಿ ಬಂದಿದ್ದರು. ಅವರೊಂದಿಗೆ ಬೇರೆ ಯಾರು ಬಂದಿರಲಿಲ್ಲ. ನಾನು ಅವರನ್ನು ವಿಚಾರಿಸಿದಾಗ, ದಿನಾಂಕ 02-10-2015 ರಂದು ಬೆಳಗಿನ ಜಾವ 00.10 ನಿಮಿಷಕ್ಕೆ ಮೊರಬ ಗ್ರಾಮದಲ್ಲಿ ನನ್ನ ಮೇಲೆ ಹಲ್ಲೆ ಆಗಿದೆ ಎಂದು ಹೇಳಿದರು. ನಾನು ಗಾಯಾಳುವನ್ನು ಪರೀಕ್ಷೆ ಮಾಡಲಾಗಿ

1) ಕುತ್ತಿಗೆಯಲ್ಲಿ ನೋವು ಮತ್ತು ದೇಹದ ಅಂಗಾಗದಲ್ಲಿ ನೋವು ಇತ್ತು.

2) ದೇಹದ ಗುಪ್ತಾಂಗದಲ್ಲಿ ನೋವು ಇದೆ ಎದು ಹೇಳಿದರು.

3. ದೇಹದ ಹೊರ ಮೈ ಮೇಲೆ ಯಾವುದೇ ಗಾಯಗಳು ಆಗಿರಲಿಲ್ಲ. ನಾನು ಗಾಯಾಳುವನ್ನು ಪರೀಕ್ಷಿಸಲಾಗಿ ಅವರಿಗೆ ನೋವು ಇರುವುದು ಕಂಡು ಬಂತು. ಗಾಯಾಳುವಿಗೆ ಆಗಿದ್ದ ಗಾಯಗಳು ಸಾಮಾನ್ಯ ಸ್ವರೂಪದ್ದಾಗಿತ್ತು. ನಾನು ಗಾಯಳುವನ್ನು ಪರೀಕ್ಷಿಸುವ ಸಮಯದಿಂದ 20 ಅಥವಾ 22 ಗಂಟೆಗಳ ಮೊದಲಿನಿಂದ ನೋವು ಇತ್ತು.

4. ಗಾಯಳು ಪ್ರಭಾಕರ ಅಸೊದೆ ಅವರನ್ನು ಪರೀಕ್ಷೆ ಮಾಡಿದ ಬಗ್ಗೆ ನಾನು ಗಾಯದ ಪ್ರಮಾಣ ಪತ್ರವನ್ನು ನೀಡಿದ್ದೇನೆ. ಅದನ್ನು ನಿಪಿ-8 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-8 [ಎ] ಎಂದು ಗುರುತಿಸಲಾಯಿತು.

5. ದಿನಾಂಕ 02-10-2015 ರಂದು ರಾತ್ರಿ 10.30 ಗಂಟೆಗೆ ನಾನು ಆಸ್ಪತ್ರೆಯಲ್ಲಿ ಕರ್ತವ್ಯದಲ್ಲಿ ಇದ್ದಾಗ ಮೊರಬ ಗ್ರಾಮದ 30 ವರ್ಷ ವಯಸ್ಸಿನ ದಿಲೀಪ ಶಾಮರಾವ ಅಸೊದೆ ಎನ್ನುವವರು ಆಸ್ಪತ್ರೆಗೆ ಚಿಕಿತ್ಸೆಗಾಗಿ ಬಂದಿದ್ದರು. ಅವರೊಂದಿಗೆ ಬೇರೆ ಯಾರು ಬಂದಿರಲಿಲ್ಲ. ನಾನು ಅವರನ್ನು ವಿಚಾರಿಸಿದಾಗ, ದಿನಾಂಕ 02-10-2015 ರಂದು ಬೆಳಗಿನ ಜಾವ 00.10 ನಿಮಿಷಕ್ಕೆ ಮೊರಬ ಗ್ರಾಮದಲ್ಲಿ ನನ್ನ ಮೇಲೆ ಹಲ್ಲೆ ಆಗಿದೆ ಎಂದು ಹೇಳಿದರು. ನಾನು ಗಾಯಾಳುವನ್ನು ಪರೀಕ್ಷೆ ಮಾಡಲಾಗಿ

1) ದೇಹದ ಅಂಗಾಗದಲ್ಲಿ ನೋವು ಇತ್ತು.

6. ದೇಹದ ಹೊರ ಮೈ ಮೇಲೆ ಯಾವುದೇ ಗಾಯಗಳು ಆಗಿರಲಿಲ್ಲ. ನಾನು ಗಾಯಾಳುವನ್ನು ಪರೀಕ್ಷಿಸಲಾಗಿ ಅವರಿಗೆ ನೋವು ಇರುವುದು ಕಂಡು ಬಂತು. ಗಾಯಾಳುವಿಗೆ ಆಗಿದ್ದ ಗಾಯಗಳು ಸಾಮಾನ್ಯ ಸ್ವರೂಪದ್ದಾಗಿತ್ತು. ನಾನು ಗಾಯಳುವನ್ನು ಪರೀಕ್ಷಿಸುವ ಸಮಯದಿಂದ 20 ಅಥವಾ 22 ಗಂಟೆಗಳ ಮೊದಲಿನಿಂದ ನೋವು ಇತ್ತು.

7. ಗಾಯಳು ದಿಲೀಪ ಶಾಮರಾವ ಅಸೊದೆ ಅವರನ್ನು ಪರೀಕ್ಷೆ ಮಾಡಿದ ಬಗ್ಗೆ ನಾನು ಗಾಯದ ಪ್ರಮಾಣ ಪತ್ರವನ್ನು ನೀಡಿದ್ದೇನೆ. ಅದನ್ನು ನಿಪಿ-9 ಎಂದು, ಅದರ

ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ–9 [ಎ] ಎಂದು ಗುರುತಿಸಲಾಯಿತು.

8. ದಿನಾಂಕ 02–10–2015 ರಂದು ರಾತ್ರಿ 10.40 ಗಂಟೆಗೆ ನಾನು ಆಸ್ಪತ್ರೆಯಲ್ಲಿ ಕರ್ತವ್ಯದಲ್ಲಿ ಇದ್ದಾಗ ಮೊರಬ ಗ್ರಾಮದ 31 ವರ್ಷ ವಯಸ್ಸಿನ ಚನ್ನಪ್ಪ ಅರ್ಜುನ ಅಸೊದೆ ಎನ್ನುವವರು ಆಸ್ಪತ್ರೆಗೆ ಚಿಕಿತ್ಸೆಗಾಗಿ ಬಂದಿದ್ದರು. ಅವರೊಂದಿಗೆ ಬೇರೆ ಯಾರು ಬಂದಿರಲಿಲ್ಲ. ನಾನು ಅವರನ್ನು ವಿಚಾರಿಸಿದಾಗ, ದಿನಾಂಕ 02–10–2015 ರಂದು ಬೆಳಗಿನ ಜಾವ 00.10 ನಿಮಿಷಕ್ಕೆ ಮೊರಬ ಗ್ರಾಮದಲ್ಲಿ ನನ್ನ ಮೇಲೆ ಹಲ್ಲೆ ಆಗಿದೆ ಎಂದು ಹೇಳಿದರು. ನಾನು ಗಾಯಾಳುವನ್ನು ಪರೀಕ್ಷೆ ಮಾಡಲಾಗಿ

1) ದೇಹದ ಅಂಗಾಗದಲ್ಲಿ ನೋವು ಇತ್ತು.

9. ದೇಹದ ಹೊರ ಮೈ ಮೇಲೆ ಯಾವುದೇ ಗಾಯಗಳು ಆಗಿರಲಿಲ್ಲ. ನಾನು ಗಾಯಾಳುವನ್ನು ಪರೀಕ್ಷಿಸಲಾಗಿ ಅವರಿಗೆ ನೋವು ಇರುವುದು ಕಂಡು ಬಂತು. ಗಾಯಾಳುವಿಗೆ ಆಗಿದ್ದ ಗಾಯಗಳು ಸಾಮಾನ್ಯ ಸ್ವರೂಪದ್ದಾಗಿತ್ತು. ನಾನು ಗಾಯಳುವನ್ನು ಪರೀಕ್ಷಿಸುವ ಸಮಯದಿಂದ 20 ಅಥವಾ 22 ಗಂಟೆಗಳ ಮೊದಲಿನಿಂದ ನೋವು ಇತ್ತು.

10. ಗಾಯಳು ಚನ್ನಪ್ಪ ಅರ್ಜುನ ಅಸೊದೆ ಅವರನ್ನು ಪರೀಕ್ಷೆ ಮಾಡಿದ ಬಗ್ಗೆ ನಾನು ಗಾಯದ ಪ್ರಮಾಣ ಪತ್ರವನ್ನು ನೀಡಿದ್ದೇನೆ. ಅದನ್ನು ನಿಪಿ–10 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ–10 [ಎ] ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ 1, 2, 5, 6 ಮತ್ತು 9 ನೇ ಆರೋಪಿತರ ಪರ</u>**

**<u>ಶ್ರೀ.ಆರ್.ಸಿ.ಪಿ ವಕೀಲರಿಂದಃ</u>**

11. ದೇಹದಲ್ಲಿ ನೋವು ಇದೆ ಎಂದು ಗಾಯಾಳು ಹೇಳಿದ್ದರಿಂದ ನಾನು ಆ ರೀತಿ ಗಾಯದ ಪ್ರಮಾಣ ಪತ್ರದಲ್ಲಿ ಬರೆದಿದ್ದೇನೆ ಎಂದು ಸೂಚಿಸುವುದು ಸರಿ. ಸಾಕ್ಷಿ ಮುಂದುವರೆದು ಚಿಕಿತ್ಸೆ ನೀಡಿದ್ದೇನೆ ಎಂದು ಹೇಳಿದ್ದಾರೆ.

12. ಗಾಯಾಳು ಪ್ರಭಾಕರ ಅಸೂದೆ ಅವರ ಗುಪ್ತಾಂಗದಲ್ಲಿ ನೋವು ಇದ್ದ ಬಗ್ಗೆ ultra sound ಅಥವಾ Dopler test ಮಾಡಿಸಿದ್ದಿರಾ ಎನ್ನುವುದಕ್ಕೆ ನಮ್ಮಲ್ಲಿ ಆ ವ್ಯವಸ್ಥೆ ಇಲ್ಲದೆ ಇರುವುದರಿಂದ ನಾನು ಚಿಕಿತ್ಸೆ ಮಾತ್ರ ನೀಡಿದ್ದೇನೆ, ನೋವು ಕಡಿಮೆ ಆಗದಿದ್ದರೆ ಹೆಚ್ಚಿನ ಚಿಕಿತ್ಸೆ ಮಾಡಿಸಿಕೊಳ್ಳಿ ಎಂದು ನಾನು ಗಾಯಳುವಿಗೆ ಹೇಳಿ ಕಳಿಸಿದ್ದೇನೆ ಎಂದು ಹೇಳಿದ್ದಾರೆ. ಗುಪ್ತಾಂಗದಲ್ಲಿ ನೋವು ಇರುವ ಬಗ್ಗೆ ultra sound ಅಥವಾ Dopler test ಮಾಡಿಸಿದಾಗ ಮಾತ್ರ ಗೊತ್ತಾಗುತ್ತದೆ ಎನ್ನುವುದು ಸರಿ. ಗುಪ್ತಾಂಗದಲ್ಲಿ ಕಲ್ಲು ಇದ್ದಾಗ ಅಥವಾ ಹರ್ನಿಯಾ ಆದಾಗಲೂ ಸಹ ನೋವು ಬರುತ್ತದೆ ಎನ್ನುವುದು ಸರಿ. ಈ ಪ್ರಕರಣದಲ್ಲಿ ಗಾಯಳುವಿಗೆ ಗುಪ್ತಾಂಗದಲ್ಲಿ ನೋವು ಯಾವ ಕಾರಣಕ್ಕೆ ಆಗಿದೆ ಎಂದು ನನಗೆ ಹೇಳಲು ಆಗುವುದಿಲ್ಲ ಎನ್ನುವುದು ಸರಿ.

13. ಸಾಮಾನ್ಯವಾಗಿ ನೈಸರ್ಗಿಕವಾಗಿ ಜ್ವರ ಬಂದಾಗಲೂ ಸಹ ದೇಹದಲ್ಲಿ ನೋವು ಇರುತ್ತದೆ ಎನ್ನುವುದು ಸರಿ. ಹಲ್ಲೆಯನ್ನು ಹೊರತುಪಡಿಸಿಯೂ ಸಹ ದೇಹದಲ್ಲಿ ನೋವು ಬರಬಹುದು ಎನ್ನುವುದು ಸರಿ. ಈ ಪ್ರಕರಣದಲ್ಲಿ ಪ್ರಭಾಕರ ಅಸೊದೆ, ದಿಲೀಪ ಅಸೊದೆ , ಚನ್ನಪ್ಪ ಅಸೊದೆ ಅವರಿಗೆ ಯಾವುದೇ ಗಾಯಗಳು ಆಗದೇ ಇದ್ದರು ಸಹ ಅವರಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಆ ಮೂರು ಜನರಿಗೆ ಹಲ್ಲೆಯಿಂದಲೆ ದೇಹದಲ್ಲಿ ನೋವು ಇತ್ತು ಎಂದು ನನಗೆ ನಿಖರವಾಗಿ ಹೇಳಲು ಆಗುವುದಿಲ್ಲ ಎನ್ನುವುದು ಸರಿ.

**ಪಾಟೀ ಸವಾಲುಃ 3 ಮತ್ತು 7 ನೇ ಆರೋಪಿತರ ಪರ**

**ಶ್ರೀ.ಎಸ್.ಸಿ.ಜೆ ವಕೀಲರಿಂದಃ**

ಶ್ರೀ.ಎಸ್.ಸಿ.ಜೆ ವಕೀಲರು ಶ್ರಿ ಆರ್.ಸಿ.ಪಿ ಮಾಡಿದ ಪಾಟೀ ಸವಾಲನ್ನು ತಮ್ಮ ಪಾಟೀ ಸವಾಲೆಂದು ಅಳವಡಿಸಿಕೊಂಡಿದ್ದಾರೆ.

**ಪಾಟೀ ಸವಾಲುಃ 4, 8, 10 ಮತ್ತು 11 ನೇ ಆರೋಪಿತರ ಪರ**

**ಶ್ರೀ.ಯು.ಬಿ.ಜೆ ವಕೀಲರಿಂದಃ**

14. ಮೂರು ಜನ ಗಾಯಾಳುಗಳು ರಾತ್ರಿ 10.20 ರ ಸಮಯಕ್ಕೆ ಒಟ್ಟಿಗೆ ಆಸ್ಪತ್ರೆಗೆ ಬಂದಿದ್ದರು. ನಾನು ಅವರನ್ನು ಪ್ರತ್ಯೇಕವಾಗಿ ಪರೀಕ್ಷೆ ಮಾಡಿದ್ದೇನೆ. ಗಾಯಾಳುಗಳ ಮೇಲೆ ಹಲ್ಲೆ ಆಗಿದೆ ಎಂದು ಅವರುಗಳೆ ನನಗೆ ಹೇಳಿದರು. ನಾನು ಗಾಯಾಳುಗಳನ್ನು ವಿಚಾರಿಸಿದಾಗ ಅವರ ಮೇಲೆ ಆದ ಹಲ್ಲೆಯ ಬಗ್ಗೆ ದೂರು ನೀಡಿದ್ದೇವೆ ಎಂದು ಹೇಳಿದರು ಮತ್ತು ಪೋಲಿಸರು ಚಿಕಿತ್ಸೆ ನೀಡುವಂತೆ ಮನವಿ ಮಾಡಿದ್ದರು.

15. ಸಾಮಾನ್ಯವಾಗಿ ಗಾಯಾಳುಗಳೊಂದಿಗೆ ಪೋಲಿಸರು ಸಹ ಆಸ್ಪತ್ರೆಗೆ ಬರುತ್ತಾರೆ, ಈ ಪ್ರಕರಣದಲ್ಲಿಯೂ ಸಹ ಗಾಯಳುಗಳೊಂದಿಗೆ ಪೋಲಿಸರು ಬಂದಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಮೂರು ಜನ ಗಾಯಳುಗಳ ರಕ್ತದ ಒತ್ತದ, ನಾಡಿ ಮಿಡಿತ, ಉಸಿರಾಟ ಸಹಜ ಸ್ಥಿತಿಯಲ್ಲಿತ್ತು. ಆ ಬಗ್ಗೆ ನಾನು ನಿಪಿ–8, 9 ಮತ್ತು 10 ರಲ್ಲಿ ಬರೆದಿಲ್ಲ ಎನ್ನುವುದು ಸರಿ. ಮೂರು ಜನ ಗಾಯಳುಗಳು ತಮಗೆ ದೇಹದಲ್ಲಿ ನೋವು ಇದೆ ಎಂದು ನಟಿಸಿರಬಹುದು ಎಂದು ಸೂಚಿಸುವುದು ಸರಿ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.